
ಕೇಳದೇ ಕೋರ್ಸ್ ಮಾಡಿಕೊಂಡು ಮೆಡಿಕಲ್ ಸ್ಟೋರ್ ನಲ್ಲಿ ಕೆಲಸ ಮಾಡತೊಡಗಿದ. ಅವನ ಚಿಕ್ಕಮ್ಮ ಬಟ್ಟೆ ತೊಳೆಯಲು ಹೋದಾಗ ಅವನ ಷರ್ಟಿನ ಕಿಸೆಯಲ್ಲಿ ರಾಧಾಕೃಷ್ಣ ಮೆಡಿಕಲ್ಸ್‌ನ ಚೀಟಿಗಳು ಪದೇಪದೇ ಸಿಗತೊಡಗಿದಾಗಲೇ ಗೊತ್ತಾಗಿದ್ದು ಅವನ ದಾರಿ ಕಾಲೇಜನ್ನು ಬಿಟ್ಟು ಮೆಡಿಕಲ್ ಸ್ಟೋರ್ ಕಡೆ ಹೊರಟಿದೆ ಅನ್ನುವುದು. ಒಂದು ದಿನ ರಾಜೇಂದ್ರಪ್ಪನ ತಮ್ಮ ಮೆಡಿಕಲ್ ಸ್ಟೋರ್‌ಗೆ ತಲೆನೋವಿನ ಮಾತ್ರೆ ತರುವುದಕ್ಕೆ ಹೋದಾಗ ಸಾಕ್ಷಾತ್ ರಾಹುಲನೇ ಮಾತ್ರೆ ಕೊಟ್ಟಾಗ ಒಂದು ಕ್ಷಣ ಏನು ಮಾಡಬೇಕು ಅಂತಲೇ ಗೊತ್ತಾಗಲಿಲ್ಲ.

ಅಂಥ ಒಂದು ದಿನವೇ ರಾಧಾಕೃಷ್ಣ ಮೆಡಿಕಲ್ಸ್ ಸ್ಟೋರ್ಸ್ ಶೆಟರ್ ಎಳೆಯುತ್ತಿದ್ದಾಗ ರಾಹುಲನಿಗೆ ಮನೆಯಿಂದ ಫೋನ್ ಬಂದಿದ್ದು. ಆ ವಿಷಯ ಕೇಳಿ ರಾಹುಲನ ಕಣ್ಣು ಕತ್ತಲೆ ಬಂದ ಹಾಗಾಯಿತು.

***

ರಾಧಾಕೃಷ್ಣ ಮೆಡಿಕಲ್ ಸ್ಟೋರ್ಸ್ ಹುಟ್ಟಿಕೊಂಡಿದ್ದು ಹತ್ತೊಂಬತ್ನೂರ ಎಂಬತ್ತೇಳರಲ್ಲಿ. ಆ ಕಾಲಕ್ಕೇ ಡಿಂಗ್ರಿ ಸುಧಾಕರ ಆ ಮೆಡಿಕಲ್ ಸ್ಟೋರನ್ನು ಥೇಟ್ ಸರ್ಕಾರಿ ಆಸ್ಪತ್ರೆ ಥರ, ಬಲವಾದ ಕಲ್ಲುಗಳನ್ನು ತಂದು, ಹಳೆಕಾಲದ ಬ್ರಿಟಿಶ್ ಕಟ್ಟಡದ ಥರ ಕಟ್ಟಿದ್ದ. ಅದನ್ನು ನಿರ್ಮಾಣ ಮಾಡಿದಾಗ ಮುಟ್ಟಿ, ತಡವಿ, ನೋಡಿ, ಪರೀಕ್ಷಿಸಿ ಅದರ ಅಂದ ಸವಿಯುವುದಕ್ಕೇ ಜನ ಮೆಡಿಕಲ್ ಸ್ಟೋರ್‌ಗೆ ಬರುತ್ತಿದ್ದರಂತೆ. ಸುಧಾಕರ ಅದೆಷ್ಟು ಮುತುವರ್ಜಿಯಿಂದ ಆ ಮೆಡಿಕಲ್ ಸ್ಟೋರನ್ನು ನೋಡಿಕೊಳ್ಳುತ್ತಿದ್ದನೆಂದರೆ ಒಂದು ಮೂಲೆಯಲ್ಲೂ ಬಿಂಜಲು ಬಲೆ ಕಟ್ಟಲು ಬಿಡುತ್ತಿರಲಿಲ್ಲ. ಬೆಳಿಗ್ಗೆ ಅಂಗಡಿ ತೆರೆಯುವ ಮೊದಲೇ ಒಳಗೆಲ್ಲ ಕೆಲಸಗಾರರಿಂದ ಚೆನ್ನಾಗಿ ಗುಡಿಸಿ, ಊದಿನ ಕಡ್ಡಿ ಹಚ್ಚಿಟ್ಟು, ದೇವರ ಫೋಟೋಗೆ ದೀಪ ಬೆಳಗಿ ಶೆಟರ್ ತೆರೆದರೆ ಮೆಡಿಕಲ್ ಸ್ಟೋರು ಒಂದು ರೀತಿ ದೇವಸ್ಥಾನದ ಪರಿಮಳವನ್ನು ಹೊಮ್ಮಿಸುತ್ತಿತ್ತು. ಇದರಿಂದ ಪಾಸಿಟಿವ್ ಎನರ್ಜಿ ಕೂಡ ಇರುತ್ತದೆ, ಬರುವವರು ತಮಗೇನೋ ಕಾಯಿಲೆ ಇದೆ ಅಂತ ಅಂದುಕೊಳ್ಳಲಾರರು, ಅದೇ ಅವರ ಕಾಯಿಲೆಯನ್ನು ವಾಸಿ ಮಾಡುತ್ತದೆ ಅಂತ ನಂಬಿದ್ದ. ಆದರೆ ಸುಧಾಕರನಿಗೆ ತದ್ವಿರುದ್ಧವಾಗಿ ಅವನ ಮಗ ಪ್ರದೀಪ ಹುಟ್ಟಿಕೊಂಡ ಮೇಲೆ ಮೆಡಿಕಲ್ ಸ್ಟೋರನ್ನು ಯಾವತ್ತು ತನ್ನ ಮಗ ಏನು ಮಾಡಿಬಿಡುತ್ತಾನೋ ಅಂತ ಸುಧಾಕರನಿಗೆ ಭಯವಾಗುತ್ತಿತ್ತು.



ತುಂಬ ತುಂಬ ಬುದ್ಧಿವಂತನಾಗಿದ್ದ ಪ್ರದೀಪ, ಎಲ್ಲ ವಿಷಯದಲ್ಲೂ ಎಲ್ಲ ತರಗತಿಯಲ್ಲೂ ರ‍್ಯಾಂಕ್. ಕೇಳಿದ್ದಕ್ಕೆ ಥಟ್ಟನೆ ಉತ್ತರ ಕೊಡುವುದಷ್ಟೇ ಅಲ್ಲ, ಇದ್ಯಾಕೆ ಹಿಂಗೆ ಇದ್ಯಾಕೆ ಹಂಗೆ ಅಂತ ಪ್ರಶ್ನೆ ಕೂಡ ಮಾಡುತ್ತಿದ್ದ. ಆ ಕಾಲಕ್ಕೇ ಅಪ್ಪನಿಗೆ ಹೇಳಿ ಜೀವಚರಗಳ ಕುರಿತಾದ ಎನ್‌ಸೈಕ್ಲೋಪೀಡಿಯಾ ಪುಸ್ತಕ ತರಿಸಿಕೊಂಡು ರೂಮಿನ ಕೋಣೆ ಬಾಗಿಲು ಹಾಕಿಕೊಂಡು ಓದಿಕೊಂಡುಬಿಟ್ಟಿದ್ದ. ಹಳೆ ಕಟ್ಟಡಗಳಲ್ಲೇ ಬಾವಲಿಗಳು ಹೆಚ್ಚಾಗಿ ಯಾಕೆ ಮನೆ ಕಟ್ಟಿಕೊಳ್ಳುತ್ತವೆ, ಹಾವುಗಳು ಮೊಟ್ಟೆ ಇಡುವುದಕ್ಕೆ ಹುಡುಕಿಕೊಳ್ಳುವ ಸ್ಥಳಗಳು ಯಾವುವು, ಹಾವಿನ ಪೊರೆ ಎಷ್ಟು ದಿನಗಳವರೆಗೆ ಮಣ್ಣಾಗದೇ ಉಳಿಯುತ್ತದೆ ಹೀಗೆ ಏನೇನೋ ತಿಳಿದುಕೊಂಡ ಅವನಿಗೆ ಹೈಸ್ಕೂಲಿಗೆ ಬರುವಾಗಲೇ ಶಾಲೆಗಳು, ಮೇಷ್ಟರುಗಳು ಶತದಡ್ಡರ ಥರ ಕಾಣಿಸುತ್ತಿದ್ದವು.

ಪ್ರದೀಪ ಆಗಲೇ ಊರಿನಲ್ಲಿ ನಟೋರಿಯಸ್ ಆಗಿದ್ದ. ಮೋಸ, ವಂಚನೆ, ಹಣಕಾಸಿನ ಅವ್ಯವಹಾರ ಹೀಗೆ ಸಾಕಷ್ಟು ಪ್ರಕರಣಗಳು ಆಗಲೇ ಅವನ ಹೆಸರಲ್ಲಿ ನಡೆದು ಹೋಗಿದ್ದವು. ಎರಡು ಸಲ ಸ್ಟೇಶನ್‌ಗೆ ಕರೆದೊಯ್ದರೂ, ಅಲ್ಲಿ ಅವನು ಕಾನೂನಿನ ಮಾತಾಡಿ, ತನ್ನ ಯಾವ ಕೃತ್ಯಗಳೂ ಅಪರಾಧವೇ ಅಲ್ಲ ಅಂತ ಪ್ರೂವ್ ಮಾಡಿದ್ದ. ಎಫೈಆರ್ ಹಾಕುವವರೇ ಕೈ ನಡುಗಿ ಕೂತಿದ್ದರು. ಕಡೆಗೆ ಅರೆಸ್ಟ್ ವಾರೆಂಟ್ ತೆಗೆದುಕೊಂಡು ಬಂದು ಪೊಲೀಸರು ಅವನನ್ನು ಕರೆದುಕೊಂಡು ಹೋಗಿದ್ದರು. ಒಂದೇ ವಾರಕ್ಕೆ ಅಲ್ಲಿಂದಲೂ ಅವನು ಬಿಡುಗಡೆಯಾಗಿದ್ದ. ಎಲ್ಲಿ ತಮಗೂ ಇವನ ಪ್ರಶ್ನೆಗೆ ಉತ್ತರ ಹೇಳಬೇಕಾಗಿ ಬರುತ್ತದೋ ಅಂತ ಭಯದಲ್ಲೇ ಅವರೇ ಪ್ರದೀಪನಿಂದ ತಪ್ಪಿಸಿಕೊಂಡು ಓಡುತ್ತಿದ್ದರು. ಆದರೆ ಪ್ರದೀಪನ ಮಾತುಗಳು ಅದೆಷ್ಟು ಪರಿಣಾಮಕಾರಿಯಾಗಿ ಇರುತ್ತಿದ್ದವೆಂದರೆ ಒಂದನ್ನೂ ತೆಗೆದು ಹಾಕುವಂತೇ ಇರುತ್ತಿರಲಿಲ್ಲ. ಕೂನಗಲ್ಲು ಬೆಟ್ಟದ ಕಲ್ಲಿನಲ್ಲಿ ಬೆಲೆಬಾಳುವ ಖನಿಜ ಇದೆ, ವಿದೇಶದಲ್ಲಿ ಆ ಕಲ್ಲಿಗೆ ಸಿಕ್ಕಾಪಟ್ಟೆ ಹಣ ಇದೆ ಅಂತ ಹೇಳಿದರೆ ಅದನ್ನು ಯಾರೇ ಆದರೂ ನಿರಾಕರಿಸಲು ಆಗುತ್ತಿರಲಿಲ್ಲ. ಇಷ್ಟು ಹೊತ್ತಿನ ತನಕ ಇಂಥ ಬಿಸಿಲು ಬಿದ್ದು, ಆ ಕಲ್ಲಿನಲ್ಲಿ ಇಂಥದ್ದೊಂದು ಖನಿಜ ಸೃಷ್ಟಿಯಾಗಿದೆ, ಅದರ ಬೆಲೆ ವಿಜ್ಞಾನಕ್ಕೆ ಮಾತ್ರ ಗೊತ್ತು, ಅಂಥ ವಿಜ್ಞಾನಿಗಳು ಇರುವುದು ಕೆನಡಾದಲ್ಲಿ, ಅಲ್ಲಿಗೆ ಇಂಥ ಕಲ್ಲುಗಳನ್ನು ಸಾಗಿಸುವ ಗುತ್ತಿಗೆ ತನಗೆ ಸಿಕ್ಕಿದೆ, ಅಂಥ ಕಲ್ಲುಗಳನ್ನು ನೀವು ಇಷ್ಟು ಪ್ರಮಾಣದಲ್ಲಿ ನನಗೆ ತಂದುಕೊಟ್ಟರೆ ಅದಕ್ಕೆ ನಿಮಗೆ ಇಷ್ಟು ಕಮಿಶನ್ ಸಿಕ್ಕಿಯೇ ಸಿಗುತ್ತದೆ ಅಂತ ಹೇಳುತ್ತಿದ್ದ. ಅವರು ಕಲ್ಲು ತಂದುಕೊಡುವಂತೆ ನೋಡಿಕೊಳ್ಳುತ್ತಿದ್ದ. ಅದನ್ನು ತರಿಸಿಕೊಂಡನಂತರ ಕೆಲ ಕಾಲ ನಾಪತ್ತೆಯಾಗಿ ಇನ್ಯಾರಿಗೋ ಈ ಕಲ್ಲಿನಲ್ಲಿ ಇಂಥ ಪಾಸಿಟಿವ್ ಶಕ್ತಿ ಇದೆ, ಇದನ್ನು ಮನೆಯಲ್ಲಿಟ್ಟುಕೊಂಡರೆ ಇಷ್ಟೆಲ್ಲ ಆರೋಗ್ಯ ವೃದ್ಧಿ ಆಗುತ್ತದೆ ಅಂತ ವಂಚಿಸಿ ಮಾರುತ್ತಿದ್ದ. ಅದರಲ್ಲಿ ಕೆಲ ಕಾಸನ್ನು ಕಲ್ಲು ತಂದುಕೊಟ್ಟವರ ಕಮಿಶನ್ ಅಂತ ಕೊಡುತ್ತಿದ್ದ. ಆದರೆ ಕೊಟ್ಟ ಕಮಿಶನ್ ಗಿಂತ ಹೆಚ್ಚಿನ ಲಾಭ ಅವನಿಗೆ ಆಗುತ್ತಿತ್ತು. ಆದರೆ ಆ ಲಾಭವನ್ನು ಅವನೇನೂ ಬ್ಯಾಂಕಲ್ಲಿಡುತ್ತಿರಲಿಲ್ಲ, ಕೋಟೆ ಕಟ್ಟುತ್ತಿರಲಿಲ್ಲ. ತಿರುಗಿ, ಉಂಡು, ಕುಡಿದು, ಬೇಕಿದ್ದರೆ ಗೋವಾಕ್ಕೂ ಹೋಗಿ ಕೆಸಿನೋ ಆಡಿ ಸಂಪೂರ್ಣ ಖರ್ಚು ಮಾಡಿ ಮತ್ತೆ ವಂಚನೆಗೆ ಹೊರಡುತ್ತಿದ್ದ.

ಈ ಜಗತ್ತಿನಲ್ಲಿ ಅಜ್ಞಾನ ಇರುವತನಕ ಹೇಗೂ ಹಣ ಮಾಡಬಹುದು ಅಂತ ಜೋರಾಗಿ ನಗುತ್ತಿದ್ದ. ಆ ನಗುವಿನ ಸೂಜಿ ರಾತ್ರಿಯೆಲ್ಲಾ ಚುಚ್ಚಿ ನಿದ್ದೆ ಕೆಡಿಸುತ್ತಿದ್ದುದು ಮಾತ್ರ ಡಿಂಗ್ರಿ ಸುಧಾಕರನನ್ನು.

ಕೆಲಸಕ್ಕೆ ಸೇರಿಕೊಂಡ ನಿಯತ್ತಿನ ರಾಹುಲ್ ತನ್ನ ಮಗನೇನೋ ಅಂತ ಸುಧಾಕರನಿಗೆ ಅನ್ನಿಸಲು ಶುರುವಾಗಿದ್ದೇ ಆವಾಗ. ಪ್ರತಿ ಬೆಳಿಗ್ಗೆ ಎಂಟೂಐವತ್ತಕ್ಕೇ ಬಂದು ಶಟರ್ ತೆಗೆದು, ಧೂಪ ದೀಪಗಳನ್ನೆಲ್ಲಾ ಬೆಳಗಿ ಔಷಧ ಕೊಡುವುದಕ್ಕೆ ನಿಲ್ಲುತ್ತಿದ್ದ ರಾಹುಲ, ಬಂದವರ ಆರೋಗ್ಯವನ್ನು ದೃಷ್ಟಿಯಲ್ಲಿಟ್ಟುಕೊಂಡೇ ಮಾತ್ರೆ ಮಾರುತ್ತಿದ್ದ. ಚೀಟಿ ತರದೇ ಮಾತ್ರೆ ಕೊಡುತ್ತಿರಲಿಲ್ಲ, ಚೀಟಿಯಲ್ಲಿ ಆಂಟಿಬಯಾಟಿಕ್ ಬರೆದಿದ್ದರೆ ಕಡಿಮೆ ಮಾತ್ರೆಗಳನ್ನು ಕೊಡುತ್ತಿದ್ದ. ಆಂಟಿ ಬಯಾಟಿಕ್ ಒಳ್ಳೆಯದಲ್ಲ ಅಂತ ತಿಳಿಹೇಳುತ್ತಿದ್ದ. ಸುತ್ತಮುತ್ತ ಯಾರಾದರೂ ವಯಸ್ಸಾದವರು ಮನೆಯಲ್ಲಿ ಒಬ್ಬರೇ ಇದ್ದರೆ, ಮಧ್ಯಾಹ್ನ ಊಟದ ಹೊತ್ತಿಗೆ ತಾನೇ ಹೋಗಿ, ಅವರಿಗೆ ಬೇಕಾದ ಮಾತ್ರೆ ಕೊಟ್ಟು ಬರುವುದನ್ನು ರೂಢಿ ಮಾಡಿಕೊಂಡಿದ್ದ. ಕೇಳಿದರೆ ತಾನೇ ಅಂಥವರನ್ನು ಡಾಕ್ಟರ್ ಬಳಿ ಕೂಡ ಕರೆದುಕೊಂಡು ಹೋಗುತ್ತಿದ್ದ. ಒಂದು ಸಂಜೆ ಅಂಗಡಿ ಮುಚ್ಚಿ, ಸಂಪಾದನೆಯ ಹಣ ಮತ್ತು ಅಂಗಡಿಯ ಕೀಗೊಂಚಲು ಕೊಡಲು ಮನೆಗೆ ಬಂದಾಗ ಆರಾಮಕುರ್ಚಿ ಮೇಲೆ ಸುಧಾಕರ ಮಲಗಿದ್ದ. ಅವರು ಏಳುವತನಕ ಕಾದು ಕುಳಿತಿದ್ದ ರಾಹುಲ. ಅಯ್ಯೋ ಎಬ್ಬಿಸಲಿಕ್ಕಾಗಲಿಲ್ಲವಾ ಅನ್ನುತ್ತಾ ಎದ್ದ ಸುಧಾಕರನಿಗೆ ರಾಹುಲ, ತಮ್ಮ ಮಗನೊಳಗೆ ಕಳೆದುಹೋಗಿರುವ ಮುದ್ದು ಬಾಲಕೃಷ್ಣನಂತೆ ಕಂಡ.

ಕುಡಿಯಲು ತಂಪಾದ ಮಜ್ಜಿಗೆ ತಂದುಕೊಟ್ಟ ಸುಧಾಕರ, ಹೇಳುತ್ತಾ ಹೋದ: ನೋಡಪ್ಪ ರಾಹುಲ, ಮುಂದೆ ಏನೋ ಎಂತೋ ಗೊತ್ತಿಲ್ಲ. ನನ್ನ ಕಾಲ ಮುಗಿಯಿತು ಅಂತ ಕಾಣುತ್ತದೆ. ನಾನು ಮೆಡಿಕಲ್ ಸ್ಟೋರು ಇಟ್ಟೆನೆಂದೂ, ಈ ಊರಲ್ಲಿ ಅದರಲ್ಲೆಂಥ ವ್ಯಾಪಾರ ಆಗತ್ತೆ ಅಂತ ಏನೆಲ್ಲಾ ತಮಾಷೆ ಮಾಡಿದವರಿದ್ದಾರೆ. ನನ್ನ ಮಗನ ಆಟಾಟೋಪ ನೋಡುವತನಕ ಅವರ ನಗೆಯ ಅರ್ಥ ಆಗಿರಲಿಲ್ಲ. ಈಗ ನಿಜವಾಗಿಯೂ ನನ್ನ ಮಗನಿಗೆ ಈ ಮೆಡಿಕಲ್ ಸ್ಟೋರ್‌ನಲ್ಲಿ ಅದೆಂಥದ್ದೋ ವ್ಯಾಪಾರ ಕಂಡುಬಿಟ್ಟಿದೆ ಅಂತ ಅನುಮಾನ ಶುರುವಾಗಿದೆ. ನನ್ನ ಬಗ್ಗೆ, ಪೊಲೀಸರ ಬಗ್ಗೆ ಭಯ ಇಲ್ಲ, ಈಗ ಭಯ ಅಂತ ಇದ್ದರೆ ನಿನ್ನ ಮೇಲೆ ಮಾತ್ರ. ನನ್ನ ಮಗನ ಮೈಯಲ್ಲಿ ಯಾವುದೋ ಸೈತಾನ ಸೇರಿಕೊಂಡು ಇದನ್ನೆಲ್ಲ ಮಾಡಿಸುತ್ತೆ ಅಂತ ನನಗೆ ಅನ್ನಿಸುತ್ತೆ. ನಮ್ಮ ಕುಲದೇವರು ಉಗ್ರ ನರಸಿಂಹ. ನೀನು ಅವನ ಕಣ್ಣಿಗೆ ಉಗ್ರ ನರಸಿಂಹನ ಥರ ಕಂಡರೂ ಕಂಡಿದ್ದೀತು. ಸ್ವಲ್ಪ